ಕರೆದ ಮೇಲೆ ಜನರು ಹಣವನ್ನು ಸಹ ತುಂಬಿದ್ದಾರೆ. ಆದರೆ ೫-೬ ವರ್ಷಗಳಾದರೂ ಕೂಡ ಈ ಸ್ಕೀಂ ಅಪ್ರೂವ್ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಹುಡ್ಕೋದವರಿಂದ ಮಂಜೂರು ಆಗಿರದಿದ್ದರೆ ಸರ್ಕಾರದವರಿಂದ ಆ ಯೋಜನೆಗಳು ಮಂಜೂರು ಆಗದಿದ್ದರೆ ಏತಕ್ಕೆ ನೀವು ಜನರಿಂದ ಹಣವನ್ನು ತೆಗೆದು ಕೊಳ್ಳುತ್ತೀರಿ?

ಶ್ರೀ ಧರ್ಮಸಿಂಗ್.—ಹೌಸಿಂಗ್ ಬೋರ್ಡ್‌ನ ವತಿಯಿಂದ ನಾವು ಮನೆಗಳನ್ನು ಕಟ್ಟಬೇಕಾಗಿದ್ದರೆ ಹುಡ್ಕೋ ಆದೇಶದ ಪ್ರಕಾರವಾಗಿ ನಾವು ಡಿಮ್ಯಾಂಡ್ ಸರ್ವೆ ಮಾಡಬೇಕಾಗಿರುತ್ತದೆ. ಆ ರೀತಿ ಡಿಮ್ಯಾಂಡ್ ಸರ್ವೆ ಮಾಡಿ, ಜನರಿಂದ ದುಡ್ಡು ತೆಗೆದು ಕೊಳ್ಳುತ್ತೇವೆ ಇನ್ನು ಕೊಟ್ಟಿಲ್ಲ ಎನ್ನುತಕ್ಕದ್ದನ್ನು ನಾನು ಒಪ್ಪು ತ್ತೇನೆ. ಆದರೆ ಕೆಲವು ಕಡೆಗಳಲ್ಲಿ ಬ್ರಿಸ್ಕ್ ಆಗಿ ಮಾಡುತ್ತಿದ್ದೇವೆ. ಕೆಲವು ಕಡೆಗಳಲ್ಲಿ ಮಾತ್ರ ಸ್ವಲ್ಪ ಡಿಲೆಯಾಗುತ್ತಿದೆ. ಆದರೆ ಈಗ ಪರ್ಟಿಕ್ಯುಲರ್ ಆಗಿ ಕೇಳಿರತಕ್ಕ ಪ್ರಶ್ನೆಯ ಪ್ರಕಾರ ಹೇಳುವುದಾದರೆ, ಆ ಸ್ಕೀಂ ಮುಂದಿ ಬೇರೆ ಕಡೆಗೆ ಹೋಗಲಿಲ್ಲ, ಅದಕ್ಕೆ ಒಂದು ದೊಡ್ಡ ಅಜಿಟೇಷನ್ ಕೂಡ ಆಯತು, ಮತ್ತೆ ಅವರು ಕೇಳಿದ ಲ್ಯಾಂಡ್ ಸಿಗಲಿಲ್ಲ. ಬೇರೆ ಕಡೆ ಲ್ಯಾಂಡ್ ಎಲ್ಲಿ ಅವೆಲೇಬಲ್ ಇತ್ತೋ ಅದನ್ನು ಪತ್ತೆ ಹಚ್ಚಿ ರೆವಿನ್ಯೂ ಡಿಪಾರ್ಟ್‌ಮೆಂಟಿನವರ ಜೊತೆಯಲ್ಲಿ ಮಾತನಾಡಿ ಅಲ್ಲಿ ಮಾಡುವುದಕ್ಕೆ ನಾವು ಬೇರೆ ಸ್ಕೀಂನ್ನು ಹಾಕಿಕೊಂಡಿದ್ದೇವೆ.

ಶ್ರೀ ಬಾಪುರಾವ್ ದೇಶಪಾಂಡೆ.—ದೊಡ್ಡನಾಯಕನ ಕೊಪ್ಪದಲ್ಲಿ ಜಾಗ ತೆಗೆದುಕೊಂಡು ಮಾಡುತ್ತಿದ್ದೇವೆ. ಅದಕ್ಕೆ ಹುಡ್ಕೋ ನೆರವನ್ನು ನಿರೀಕ್ಷಣೆ ಮಾಡುತ್ತಿದ್ದೇವೆಂದು ಹೇಳಿದ್ದೀರಿ, ಅದು ಇನ್ನೂ ನಿರೀಕ್ಷೆಯಲ್ಲಿರುವುದರಿಂದ ಎಷ್ಟು ದಿವಸದಲ್ಲಿ ಮನೆಗಳು ತಯಾರಾಗಬಹುದು ಎಂದು ಏನಾದರೂ ಹೇಳಬಹುದೇ ?

ಶ್ರೀ ಧರ್ಮಸಿಂಗ್.—೪೦ ಲಕ್ಷ ರೂಪಾಯಿಗಳ ಈ ಸ್ಕೀಂ ಟೆಕ್ನಿಕಲ್ ಕ್ಲಿಯರೆನ್ಸ್ ಆಗಿ ಅಪ್ರೂವಲ್ ಆಗಿದೆ, ಅಲ್ಲಿ ಎಷ್ಟು ಜನಕ್ಕೆ ಮನೆ ಬೇಕೋ ಅಷ್ಟು ಜನಕ್ಕೆ ಕೊಡುತ್ತೇವೆ, ಮನೆ ಬೇಡ ದಿದ್ದವರಿಗೆ ದುಡ್ಡನ್ನು ವಾಪಸ್ಸು ಕೊಟ್ಟುಬಿಡಿ ಎಂದು ಹೇಳಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಣ ವಾಪಸ್ಸು ಕೊಡುವುದಿಲ್ಲ, ಈಗ ಅವರು ಏನು ೭-೮ ವರ್ಷಗಳಿಂದ ಹಣವನ್ನು ಕಟ್ಟಿಹ್ಹಾರೆ ಅಂಥವರಿಗೆ ಅಲ್ಲಿ ಮನೆಗಳನ್ನು ಮೊದಲು ಕಟ್ಟಿಸಿಕೊಡಿ, ಆ ರೀತಿ ವ್ಯವಸ್ಥೆ ಮಾಡಿ.

ಶ್ರೀ ಧರ್ಮಸಿಂಗ್.—ಅದೇ ರೀತಿ ಮಾಡುತ್ತಿದ್ದೇವೆ. ಅಲ್ಲಿ ೭೭೬ ಜನರಿಗೆ ಒದಗಿಸಿ ಕೊಡುತ್ತೇವೆ.

Production of Newsprint in Mysore Paper Mills

737. SRI G. BASAVANNAPPA (Holehonnur).—Will the Chief Minister be pleased to state :—

(a) the production date of newsprint in Mysore Paper Mills Limited ;

(b) The actual production date of newsprint in Mysore Paper Mills ;

(c) The extennt of delay and the cost escalation due to this delay ;

(d) Whether the Government of India have issued licence for MPM to set up a sugar plant ;

(e) if so, when is the sugar plant expected to be set-up ?

SRI R. GUNDU RAO (Chief Minister).— (a) The production of newsprint in Mysore Paper Mills was scheduled to start during March 1980.

(b) Trial production of newsprint was started in July 1981.

(c) There has been delay of about 15 months in starting the trial production. Due to a variety of reasons including inclusion of items of plant and machinery not originally envisaged, increase in the scope of civil works increase in interest rates and statutory levies on plant, machinery and materials, processing of cases by the financial institutions before release of funds, and delay in implementation of the project etc., the cost of the project which was orginally estimated at Rs. 100 crores has been revised to Rs. 145 crores.

(d) The letter of intent issued by the Government of India in favour of Karnataka State Industrial Investment and Development Corporation for setting up a Sugar Factory has been transferred to the Mysore Paper Mills.

(c) During the crushing season of 1983-84.

ಶ್ರೀ ಜಿ. ಬಸವಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಈ ಎಂ. ಪಿ. ಎಂ. ನಲ್ಲಿ ನ್ಯೂಸ್ ಪ್ರಿಂಟಿನಿಂ ಯಾವಾಗ ಉತ್ಪಾದನೆ ಮಾಡಲಾಗುವುದು ಎನ್ನುವ ಬಗ್ಗೆ ಪ್ರಶ್ನೆ ಕೇಳಿದ್ದೇನೆ.

ಅಧ್ಯಕ್ಷರು.—ಈ ಪ್ರಶ್ನೆಗೆ ನನಗೆ ಗೊತ್ತಿರುವ ಹಾಗೆ ಸರ್ಕಾರದವರು ಒಂದು ಸಾರಿ ಭರವಸೆ ಯನ್ನು ಕೊಟ್ಟಿದ್ದಾರೆ, ಮಾರ್ಚ್ ತಿಂಗಳಲ್ಲಿ ಏನೋ...

ಶ್ರೀ ಜಿ. ಬಸವಣಪ್ಪ —ಆದರೆ ಸರಿಯಾದ ಉತ್ತರ ಬಂದಿಲ್ಲ ಅಧ್ಯಕ್ಷರೇ, ಸರ್ಕಾರದವರೇನೋ ಭರವಸೆ ಕೊಟ್ಟಿದ್ದರು, ಆದರೆ ಅದರ ಪ್ರಕಾರವಾಗಿ ಕೆಲಸವಾಗುತ್ತಿಲ್ಲ. ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೋರೇಷನ್ನಿನವರಿಗೆ ಯಾವಾಗ ಲೈಸೆನ್ ಕೊಟ್ಟಿರಿ ? ಅಲ್ಲಿಂದ ಅವರು ಎಂ. ಪಿ. ಎಂ.ಗೆ ಯಾವಾಗ ಟ್ರಾನ್ಸ್‌ಫರ್ ಮಾಡಿದರು ಎನ್ನುವುದನ್ನು ಹೇಳುವುದಕ್ಕೆ ಆಗುತ್ತದೆಯೇ ? ಯಾವ ಡೇಟ್‌ನಲ್ಲಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಯಾವ ಡೇಟ್‌ನಲ್ಲಿ ಕೊಟ್ಟರು ಎನ್ನುವುದು ಮುಖ್ಯವಲ್ಲ, ಅಲ್ಲಿಗೆ ಲೈಸೆನ್ಸ್ ಕೊಡಲಾಗಿದೆ ಮತ್ತು ೧೯೮೪ರಲ್ಲಿ ಕ್ರಶಿಂಗ್ ಆಗುತ್ತದೆ.

ಶ್ರೀ ಬಸವಣಪ್ಪ.—೧೯೭೮ರಲ್ಲಿ ಲೈಸನ್ಸ್ ಟ್ರಾನ್ಸ್‌ಫರ್ ಮಾಡಿದ್ದಾರೆ, ಆದರೆ ಇದುವರೆಗೂ ಏನಂ ಕೆಲಸಕಾರ್ಯಗಳು ಆಗಿಲ್ಲ,

ಅಧ್ಯಕ್ಷರು.—೧೯೮೪ರಲ್ಲಿ ಕ್ರಷಿಂಗ್ ಮಾಡಲಾಗುತ್ತದೆಂದು ತಿಳಿಸಿದ್ದಾರೆ. ಹಿಂದೆ ಕೂಡ ಆಶ್ವಾಸನೆ ಕೊಟ್ಟಿದ್ದಾರೆ.

ಶ್ರೀ ಜಿ. ಬಸವಣಪ್ಪ.—ಅಲ್ಲಿ ಶೇರ್ ಬಂಡವಾಳವನ್ನು ಕಲಕ್ಟ್ ಮಾಡಬೇಕು. They have not shown any initiative at all...ಶೇರ್ ಬಂಡವಾಳವನ್ನು ಕಲೆಕ್ಟ್ ಮಾಡದೇ ಇರುವುದು ರಿಂದ ಅಲ್ಲಿ ಸ್ವಲ್ಪ ಡೌಟ್ ಆರೈಜ್ ಆಗಿದೆ.

SRI R. GUNDURAO.—There is no necessity for any doubt. The crushing will start from 1984.